**ದಿನಾಂಕ: 12-08-2025ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ವಾಟೀ ಸವಾಲು: ಪ್ರತಿವಾದಿ ಪರ ಶ್ರೀ ಎಂ.ಎಸ್.ಎಂ. ವಕೀಲರಿಂದ**

5. 1975-76ರಲ್ಲಿ ಸಂಗನಬಸಮ್ಮ ಮತ್ತು ಮಲ್ಲಣ್ಣಗೌಡರವರ ನಡುವೆ ಟ್ರಿಬ್ಯುನಲನಲ್ಲಿ ಪ್ರಕರಣ ನಡೆದಿತ್ತು ಎಂದರೆ ಹೌದು ಎಂದು ಉತ್ತರಿಸಿ ಅದರ ಬಗ್ಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಸ.ನಂ.8ರ ಮೇಲೆ ಮಾನ್ಯ ಉಚ್ಛ ನ್ಯಾಯಾಲಯದಲ್ಲಿ Writ Petition No.14382/2000ರಲ್ಲಿ ದಿನಾಂಕ 22-01-2002 ರಂದು ಟ್ರಿಬ್ಯುನಲ್ ಆದೇಶವನ್ನು ರದ್ದುಪಡಿಸಬೇಕು ಎಂದು ಆದೇಶ ಆಗಿತ್ತು ಎಂದರೆ ಗೊತ್ತು ಎಂದು ಉತ್ತರಿಸುತ್ತಾರೆ. ಅದನ್ನು ರದ್ದುಪಡಿಸಿ ಜೇವರ್ಗಿಯ ಟ್ರಿಬ್ಯುನಲನಲ್ಲಿ ಮರುವಿಚಾರಣೆ ಮಾಡಬೇಕು ಎಂದು ಆದೇಶ ಮಾಡಲಾಯಿತು ಎಂದರೆ ಗೊತ್ತು ಎಂದು ಉತ್ತರಿಸುತ್ತಾರೆ. ಉಚ್ಛ ನ್ಯಾಯಾಲಯದ ಪ್ರಕಾರ ಜೇವರ್ಗಿಯ ನ್ಯಾಯ ಮಂಡಳಿಯವರು ದಿನಾಂಕ 21-10-2003 ರಿಂದ 28-02-2004ರವರೆಗೆ ಪ್ರಕರಣದ ವಿಚಾರಣೆ ನಡೆಸಿದರು ಎಂದರೆ ಸರಿ. ಇದರ ಬಗ್ಗೆ ನಿಮಗೆ ನೋಟಿಸು ಬಂದಿತ್ತು ಎಂದರೆ ನೋಟಿಸ್ ಬಂದಿಲ್ಲ ಆದರೆ ಫೋನ್ ಕರೆ ಬಂದಿತ್ತು ಎಂದು ಉತ್ತರಿಸುತ್ತಾರೆ. ದಾವಾ ಆಸ್ತಿಯ ಬಗ್ಗೆ ಟ್ರಿಬ್ಯುನಲನಲ್ಲಿ ನಡೆದಂತಹ ವಿಚಾರಣೆಯಲ್ಲಿ ಭೂಮಾಲೀಕರ ಪರವಾಗಿ ಅಂದರೆ ಬಸಮ್ಮ ಮತ್ತು ನೀಲಮ್ಮರವರ ಪರವಾಗಿ ಶ್ರೀ ಜೆ.ವಿ.ಹತ್ತಿ ವಕೀಲರು ವಿಚಾರಣೆಯನ್ನು ನಡೆಸಿದರು ಎಂದರೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ.

6. ದಾವಾ ಆಸ್ತಿಗೆ ಸಂಬಂಧಿಸಿದಂತೆ ದಿನಾಂಕ 21-02-2004 ರಂದು ಮಾನ್ಯ ತಹಸಿಲ್ದಾರ ಜೇವರ್ಗಿರವರು ಸಹಾಯಕ ಸರಕಾರಿ ಅಭಿಯೋಜಕರು ಲೋಕಾಯುಕ್ತ ಕರ್ನಾಟಕ ಸರಕಾರ ಬೆಂಗಳೂರುರವರಿಗೆ ಒಂದು ಪತ್ರವನ್ನು ಬರೆದಿರುತ್ತಾರೆ ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ. ಈ ಪತ್ರ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಬರೆದಿರುತ್ತಾರೆ ಎಂದರೆ ಅದರ ಬಗ್ಗೆ ಮಾಹಿತಿ ಇಲ್ಲ ಎಂದು ಉತ್ತರಿಸುತ್ತಾರೆ. ಈ ಪತ್ರ ಬರೆಯುವ ಉದ್ದೇಶ ಏನೆಂದರೆ 1ನೇ ಪ್ರತಿವಾದಿ ದೂರನ್ನು ಸಲ್ಲಿಸಿದ ಕಾರಣ ತಹಸಿಲ್ದಾರ ಜೇವರ್ಗಿರವರು ಸದರಿ

ಪತ್ರವನ್ನು ಲೋಕಾಯುಕ್ತಕ್ಕೆ ಬರೆದಿರುತ್ತಾರೆ ಎಂದರೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ದಿನಾಂಕ 24-03-2022 ರಂದು ಮುದೋಳ ಕೆ ಗ್ರಾಮಕ್ಕೆ ಗ್ರಾಮ ಲೆಕ್ಕಾಧಿಕಾರಿರವರು ಬಂದು ಬಸಮ್ಮ, ನೀಲಮ್ಮ, ಟೆನೆಂಟಿ ಹೋಲ್ಡರ್ ಶಿವರಾಜರವರ ಬಗ್ಗೆ ವಾರಸುದಾರರು ಯಾರು ಎಂದು ಪಂಚನಾಮೆ ಮಾಡಿದರು ಎಂದರೆ ಮಾಡಿದ್ದಾರೆ ಎಂದು ಉತ್ತರಿಸುತ್ತಾರೆ. ಸದರಿ ಪಂಚನಾಮೆಯಲ್ಲಿ ನೀಲಮ್ಮಳಿಗೆ ಯಾರೂ ವಾರಸುದಾರರು ಇಲ್ಲ ಎಂದು ತಹಸಿಲ್ದಾರರವರಿಗೆ ವರದಿ ಸಲ್ಲಿಸಿರುತ್ತಾರೆ ಎಂದರೆ ನೀಲಮ್ಮರವರ ವಾರಸುದಾರರು ಇದ್ದಾರೆ ಎಂದು ವರದಿ ಸಲ್ಲಿಸಿದ್ದಾರೆ ಎಂದು ಉತ್ತರಿಸುತ್ತಾರೆ. ದಾವಾ ಆಸ್ತಿಯ ಬಗ್ಗೆ ಮಲ್ಲಣ್ಣಗೌಡ ತಂದೆ ಶರಣಗೌಡರವರು ಫಾರಂ ನಂ.7 ನ್ನು ಸಲ್ಲಿಸಿದ ಬಗ್ಗೆ ದಿನಾಂಕ 20-10-1992 ರಂದು ಟೆನೆಂಟಿ ಗ್ರ್ಯಾಂಟಿ ಮಾಡಿದ್ದಾರೆ ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ. ಇದರ ಸಲುವಾಗಿ ಸಂಗನಬಸಮ್ಮ, 1ನೇ ಪ್ರತಿವಾದಿ ಸೇರಿ ಮಾನ್ಯ ಉಚ್ಛ ನ್ಯಾಯಾಲಯದಲ್ಲಿ Writ Petition No.14382/2000 ನ್ನು ಸಲ್ಲಿಸಿರುತ್ತಾರೆ ಎಂದರೆ ಅದರ ಬಗ್ಗೆ ಮಾಹಿತಿ ಇಲ್ಲ ಎಂದು ಉತ್ತರಿಸುತ್ತಾರೆ.

7. 1ನೇ ಪ್ರತಿವಾದಿಯು ಮಾನ್ಯ ತಹಸಿಲ್ದಾರರವರಿಗೆ ದಾವಾ ಆಸ್ತಿಯ ಮೇಲೆ ಯಾರು ಗೇಣಿದಾರರು ಇದ್ದಾರೆ ಎಂದು ಅರ್ಜಿ ಕೊಟ್ಟಿದ್ದಾರೆ ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ. ದಿನಾಂಕ 04-10-2022 ರಂದು ದಾವಾ ಆಸ್ತಿಗೆ ಯಾರೂ ಗೇಣಿದಾರರು ಇಲ್ಲ ಎಂದು ಹಿಂಬರಹ ಕೊಟ್ಟಿದ್ದಾರೆ ಎಂದರೆ ಅದರ ಬಗ್ಗೆ ಮಾಹಿತಿ ಇಲ್ಲ ಎಂದು ಉತ್ತರಿಸುತ್ತಾರೆ. ದಾವಾ ಆಸ್ತಿಗೆ ಸಂಬಂಧಿಸಿದಂತೆ 1ನೇ ಪ್ರತಿವಾದಿಯು ಮಾನ್ಯ ಮುಖ್ಯ ಮಂತ್ರಿರವರಿಗೆ ಪತ್ರವನ್ನು ಬರೆದಿದ್ದಾರೆ ಎಂದರೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ದಿನಾಂಕ 24-09-2016 ರಂದು ಮಾನ್ಯ ಮುಖ್ಯಮಂತ್ರಿ ಕಚೇರಿಯಿಂದ 1ನೇ ಪ್ರತಿವಾದಿಗೆ ಒಂದು ಹಿಂಬರಹವನ್ನು ನೀಡಿದ್ದಾರೆ ಎಂದರೆ ಅದರ ಬಗ್ಗೆ ಮಾಹಿತಿ ಇಲ್ಲ ಎಂದು ಉತ್ತರಿಸುತ್ತಾರೆ. ದಿನಾಂಕ 02-11-2016 ರಂದು 1ನೇ ಪ್ರತಿವಾದಿಯು ಜಿಲ್ಲಾಧಿಕಾರಿಗೆ ಒಂದು ಪತ್ರವನ್ನು ಬರೆದಿರುತ್ತಾರೆ ಎಂದರೆ ಸುಳ್ಳು ಇದೆ ಅದರ ಬಗ್ಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ.

ಎ.ಸಿ.ರವರು ದಾವಾದ ಆಸ್ತಿಯ ಮೇಲೆ ಅಪೀಲ್ ನಂ.6/2000-01 ರಲ್ಲಿ ದಿನಾಂಕ 28-11-2002 ರಂದು ಒಂದು ಆದೇಶ ಮಾಡಿದ್ದಾರೆ ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ.

8. ದಾವಾ ಆಸ್ತಿಯ ಚೆಕಬಂದಿ ಹೇಳಲು ಬರುತ್ತದೆ. ದಾವಾ ಆಸ್ತಿಯ ದಕ್ಷಿಣಕ್ಕೆ ಅಯ್ಯಪ್ಪಗೌಡ ಶಾಂತಗೌಡರವರ ಜಮೀನು ಬರುತ್ತದೆ. ದಾವಾದ ಆಸ್ತಿಯು ಮೊದಲು ಮಡ್ಡಿ ಇತ್ತು ನಂತರ ಸ್ವಚ್ಛ ಮಾಡಿದ ನಂತರ ಎರೆ ಭೂಮಿ ಆಯಿತು ಎಂದು ಉತ್ತರಿಸುತ್ತಾರೆ. ಒಂದು ಎಕರೆಗೆ ಮಡ್ಡಿ ಜಮೀನು ಸರಕಾರಿ ಬೆಲೆ ಎಷ್ಟು ಇದೆ ಎಂದರೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ದಾವಾದ ಆಸ್ತಿಯ ಬಗ್ಗೆ 1 ಮತ್ತು 2ನೇ ಪ್ರತಿವಾದಿಯರಿಗೆ ಫಾರಂ -10 ಆಗಿದೆ ಎಂದರೆ ನಮಗೆ ಗೊತ್ತಿರಲಾರದೇ ನಮ್ಮ ತಾಯಿ ಮತ್ತು ನಮ್ಮ ಅಜ್ಜಿ ತೀರಿಕೊಂಡ ನಂತರ 2010 ರಲ್ಲಿ ಮಾಡಿಕೊಂಡಿದ್ದಾರೆ ಎಂದು ಉತ್ತರಿಸುತ್ತಾರೆ. ದಾವಾದ ಆಸ್ತಿಯ ಬಗ್ಗೆ 1 ಮತ್ತು 2ನೇ ಪ್ರತಿವಾದಿಯವರಿಗೆ ಫಾರ್ಮರ್ ಐಡಿ ನಂಬರ್ (F.I.D.) ಸಹಿತ ಆಗಿದೆ ಎಂದರೆ ನಮಗೆ ಗೊತ್ತಿಲ್ಲದೇ ಮಾಡಿಸಿಕೊಂಡಿದ್ದಾರೆ ಎಂದು ಉತ್ತರಿಸುತ್ತಾರೆ. F.I.D. No.0407000024243 ರಂತೆ 1 ಮತ್ತು 2ನೇ ಪ್ರತಿವಾದಿ ಹೆಸರಿಗೆ ನೊಂದಣಿ ಆಗಿದೆ ಎಂದರೆ ನಮಗೆ ಗೊತ್ತಿಲ್ಲದೇ ಮಾಡಿಸಿಕೊಂಡಿದ್ದಾರೆ ಎಂದು ಉತ್ತರಿಸುತ್ತಾರೆ. ಫಾರಂ ನಂ.10 ಮತ್ತು F.I.D. Number ಕೊಟ್ಟಿರುವ ಬಗ್ಗೆ ತಕರಾರು ಅರ್ಜಿಯನ್ನು ಕೊಟ್ಟಿರುತ್ತೇನೆ. ತಕರಾರು ಅರ್ಜಿಯನ್ನು ಕೊಟ್ಟಿರುವ ಬಗ್ಗೆ ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ. ತಕರಾರು ಅರ್ಜಿ ಕೊಟ್ಟಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

9. ದಿನಾಂಕ 09-09-2024 ರಂದು ದಾವಾ ಆಸ್ತಿ ಮೇಲೆ ಕಂದಾಯ ನಿರೀಕ್ಷಕರು, ಗ್ರಾಮ ಲೆಕ್ಕಾಧಿಕಾರಿ, ಪಂಚರು ಬಂದು GPS ಮಾಡಿದ್ದಾರೆ ಎಂದರೆ ಮಾಡಿದ್ದಾರೆ ಎಂದು ಉತ್ತರಿಸುತ್ತಾರೆ. ಈ ಪಂಚನಾಮೆಗೆ ಗ್ರಾಮದ ರೈತರು, ಪಂಚರು, ಕಂದಾಯ ನಿರೀಕ್ಷಕರು, ಗ್ರಾಮ ಲೆಕ್ಕಾಧಿಕಾರಿರವರು ಸಹಿ ಮಾಡಿ ಕೊಟ್ಟಿದ್ದಾರೆ ಎಂದರೆ ಗ್ರಾಮದ ರೈತರು ಸಹಿ ಮಾಡಿಲ್ಲ ಕಂದಾಯ ನಿರೀಕ್ಷಕರು ಸಹಿ ಮಾಡಿರುತ್ತಾರೆ ಎಂದು ಉತ್ತರಿಸುತ್ತಾರೆ.

**ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಸಾಕ್ಷಿಯ ಮುಂದುವರೆದ ಪಾಟೀ ಸವಾಲು ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ.ಕೇ. ಸರಿ ಅದೆ

ಹಿರಿಯ ಸಿವಿಲ್ ಮತ್ತು ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಜೇವರ್ಗಿ